# ಗೋಲಿ ರಾಜ!







ಸಣ್ಣ ಮಕ್ಕಳಿಗೆ ಬಣ್ಣ ಬಣ್ಣದ ಗೋಲಿ ಗುಂಡುಗಳೆಂದರೆ ತುಂಬ ಪ್ರೀತಿ. ಲಂಡನ್ನಿನ ಹಾರ್ಲಿ ಜೋರ್ಡಿಯನ್ ಎಂಬ 8 ವರ್ಷ ಹುಡುಗನಿಗೆ ಆ ಪ್ರೀತಿ ತುಂಬಾನೇ ಜಾಸ್ತಿ! ಆತ ಬೆಳಿಗ್ಗೆ ಏಳುವಾಗ ಹೇಳುವ ಮೊದಲ ಮಾತು ಹಾಗೂ ರಾತ್ರಿ ಮಲಗುವಾಗ ಹೇಳುವ ಕೊನೆಯ ಮಾತು ಎಂದರೆ ಮಾರ್ಬಲ್. ಅದಕ್ಕೆಂದೇ ಆತನಿಗೆ 'ಮಾರ್ಬಲ್ ಕಿಂಗ್' ಎಂಬ ಉಪನಾಮವೂ ಇದೆ. ತೀರ ಎಳೆ ವಯಸ್ಸಿನಲ್ಲಿಯೇ ಈ ಗೋಲಿಗಳ ಹುಚ್ಚು ಆತನಿಗೆ ಅಂಟಿಕೊಂಡಿತು. ಬೇರೆ ಬೇರೆ ಗಾತ್ರ, ಬಣ್ಣ, ವರ್ಣ ವಿನ್ಯಾಸಗಳ ಗೋಲಿಗಳನ್ನು ಆತ ಸಂಗ್ರಹಿಸಿದ. ಅವುಗಳನ್ನು ತನ್ನ ಶಾಲೆಯ ಹಿರಿಯ ವಿದ್ಯಾರ್ಥಿಗಳಿಗೆ ತೋರಿಸಿದ. ಅವರೂ ಅವುಗಳನ್ನು ಪಡೆಯುವ ಆಸೆ ತೋರಿಸಿದಾಗ ಅವರಿಗೆ ಗೋಲಿಗಳನ್ನು ಮಾರಿ ಹಣ ಪಡೆದ. ಶಾಲೆಯಿಂದಲೇ ಆತನ ವ್ಯಾಪಾರ ಶುರುವಾಯ್ತು.

'ಈಗ ಆತ ಪ್ರತಿವರ್ಷ ಸಾವಿರಾರು ಪೌಂಡ್ ವ್ಯವಹಾರ ಕುದುರಿಸಿದ್ದಾನೆ. ಅದಕ್ಕಾಗಿ ಒಂದು ವೆಬ್‌ಸೈಟ್ ಆರಂಭಿಸಿದ್ದಾನೆ. ಅದನ್ನು ಪ್ರಾರಂಭಿಸಲು ಅವನ ತಾಯಿ ಟೀನಾ ಸಹಾಯ ಮಾಡಿದ್ದಾಳೆ. ಗೋಲಿಗಳ ಆಯ್ಕೆ ಮಾಡುವುದು, ಬೇರೆ ಬೇರೆ ಕಂಪನಿಗಳಿಂದ ಬಗೆ ಬಗೆಯ ಗೋಲಿಗಳನ್ನು ತರಿಸಿಕೊಳ್ಳುವುದು, ಆಮೇಲೆ ಅವುಗಳನ್ನು ಸರಿಯಾಗಿ ಪ್ಯಾಕ್ ಮಾಡಿ ಆರ್ಡರ್ ಕೊಟ್ಟವರಿಗೆ ರವಾನಿಸುವುದು.. ಎಲ್ಲವನ್ನೂ ಹಾರ್ಲಿ ತಾನೇ ಮಾಡುತ್ತಾನೆ. ಅವನ ಇಬ್ಬರು ಅಣ್ಣಂದಿರು ಅವನಿಗೆ ಸಹಾಯ ಮಾಡುತ್ತಾರೆ. ನಾನು ವ್ಯವಹಾರದ ಲೆಕ್ಕ ಪತ್ರವನ್ನು ನೋಡಿಕೊಳ್ಳುತ್ತೇನೆ' ಎಂದು 51 ವರ್ಷದ ತಾಯಿ ಟೀನಾ ಹೇಳುತ್ತಾಳೆ. ದೂರದ ಅಮೆರಿಕ ದೇಶದಲ್ಲೂ ಆತನ ಗೋಲಿಗಳಿಗೆ ಬಹು ಬೇಡಿಕೆ ಇದೆಯಂತೆ.

ಲಂಡನ್ನಿನ ಪ್ರಮುಖ ಮಾರುಕಟ್ಟೆಯಲ್ಲಿ ಎಲ್ಲಾ ಬಗೆಯ ಗೋಲಿಗಳುಳ್ಳ ಒಂದು ವ್ಯಾಪಾರಿ ಮಳಿಗೆಯನ್ನು ತೆರೆಯುವ ಉದ್ದೇಶ ಈ ಪುಟ್ಟನಿಗಿದೆ. ಅದು ವಿಶ್ವದ ಅತಿ ದೊಡ್ಡ ಆಟಿಕೆಗಳ ಮಳಿಗೆ 'ಹ್ಯಾಮ್‌ಲೇಸ್' ತರಹ ಇರಬೇಕೆಂಬುದು ಆತನ ಕನಸು. ತನ್ನದೇ ಆದ ಗೋಲಿ ಉತ್ಪಾದನಾ ಘಟಕವೊಂದನ್ನು ಚೀನಾ ದೇಶದಲ್ಲಿ ಆರಂಭಿಸುವ ಹಾಗೂ ಅದಕ್ಕೆ ತನ್ನ ಉಪ ನಾಮವಾದ 'ಮಾರ್ಬಲ್ ಕಿಂಗ್' ಎಂದು ಹೆಸರಿಡುವ ಯೋಚನೆಯಲ್ಲಿದ್ದಾನೆ. ಜಗತ್ತಿನಾದ್ಯಂತ ವ್ಯಾಪಾರಿ ಮಳಿಗೆಗಳನ್ನು ಸ್ಥಾಪಿಸಿ ಎಲ್ಲ ಮಕ್ಕಳಿಗೂ 'ಮಾರ್ಬಲ್ ಕಿಂಗ್' ಗೋಲಿಗಳು ದೊರೆಯುವಂತೆ ಮಾಡುವ ಮಹತ್ವಾಕಾಂಕ್ಷೆಯನ್ನು ಹಾರ್ಲಿ ಹೊಂದಿದ್ದಾನೆ. ಹಾಗೇನಾದರೂ ಆದರೆ ಟಿವಿ ಹಾಗೂ ಕಂಪ್ಯೂಟರ್‌ಗಳಲ್ಲಿ ಮುಳುಗಿದ ಇಂದಿನ ಮಕ್ಕಳು ಗೋಲಿ ಆಡಲು ಅಂಗಳಕ್ಕೆ ಬರಬಹುದೇನೋ?!

ಅಂದ ಹಾಗೆ, ಎಂಟು ವರ್ಷದ ಹಾರ್ಲಿ ಗೋಲಿಗಳ ವ್ಯಾಪಾರ ಆರಂಭಿಸಿದ್ದು ಎರಡು ವರ್ಷಗಳ ಹಿಂದೆ. ಆಗ ಆತನಿಗೆ ಕೇವಲ 6 ವರ್ಷ!

■ ಸುಭಾಸ ಯಾದವಾಡ